ವೇದಿಕೆಯ ಮೇಲಿರುವವರ ಸಂಖ್ಯೆ ಪ್ರೇಕ್ಷಕರನ್ನು ದಾಟುತ್ತದೆ. ಒಮ್ಮೆ ಪ್ರಥಮ ದರ್ಜೆ ಗುತ್ತಿಗೆದಾರ ಸಂಘದ ಉದಾರ ನೆರವಿನಿಂದ ಏರ್ಪಟ್ಟಿದ್ದ ಯುವಲೇಖಕನ ಪುಸ್ತಕ ಬಿಡುಗಡೆಗೆ ಹೋಗಿದ್ದೆ. ಆತ ಆಯೋಜಕರನ್ನು ವೇದಿಕೆ ಮೇಲೆ ಕೂರಿಸುತ್ತ ಹೋದ. ನಾನು ಮಾತು ಆರಂಭಿಸಬೇಕು, ಅಷ್ಟರಲ್ಲಿ ವೇದಿಕೆ ತುದಿಗೆ ಇಕ್ಕಟ್ಟಿನಲ್ಲಿ ಪ್ಲಾಸ್ಟಿಕ್‌ಚೇರಿನಲ್ಲಿ ಕುಳಿತಿದ್ದ ಧಡೂತಿ ವ್ಯಕ್ತಿಯೊಬ್ಬರು ಕುರ್ಚಿಯ ಕಾಲು ಹಿಸಿದು ಉರುಳಿಬಿದ್ದರು. ಮತ್ತೊಮ್ಮೆ ಸಮೀಪದ ಊರೊಂದರಲ್ಲಿ ನೂರುಕವಿಗಳ ಗೋಷ್ಠಿಯನ್ನು ಉದ್ಘಾಟಿಸಿ, 'ತುರ್ತು' ಕೆಲಸದಿಂದ ನಿಜ ಹೇಳಬೇಕೆಂದರೆ ಕವಿಗಳ ಹೊಡೆತದಿಂದ ತಪ್ಪಿಸಿಕೊಳ್ಳಲು ನಡುವೆ ಎದ್ದು ಬಂದೆ. ಮನೆಮುಟ್ಟಿ ಊಟ ಮುಗಿಸಿ ಮಲಗುವಾಗ ರಾತ್ರಿ 11 ಗಂಟೆ. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಕವಿಗಳಿಗೆ ಕ್ಷಮೆಕೇಳಲೆಂದು ಕರೆಮಾಡಿ 'ಎಷ್ಟೊತ್ತಿಗೆ ಮುಗೀತು?' ಎಂದೆ. ಅದಕ್ಕವರು 'ಮುಗಿಯೋದೆಲ್ಲಿಂದ? ಇನ್ನೂ 40 ಕವಿಗಳ ವಾಚನ ಬಾಕಿಯಿದೆ' ಎಂದರು. ನಂಬಲೇಬೇಕಾಯಿತು. 'ಬಿಸಿಲೇ ಬೆಳದಿಂಗಳೆಂದು ನಡೆಯುವವರು ನಾವು; ಅಹೋರಾತ್ರಿ ದುಡಿಯುವರಿಗೆ ಇನ್ನೆಲ್ಲಿಯ ಸಾವು' ಹಿನ್ನೆಲೆಯಲ್ಲಿ ಕೇಳುತ್ತಿತ್ತು. ಕವಿಗಳು ದೇಶಾತೀತರು ಕಾಲಾತೀತರು ಎನ್ನುವುದು ಸುಳ್ಳಲ್ಲ.

ಪುಷ್ಪಸಮರ್ಪಣ ಕಾರ್ಯಕ್ರಮದಲ್ಲಿ ಈಚೆಗೆ ಮಕ್ಕಳ ಕೈಗೆ ಲಾಲಿಪಪ್ ಕೊಟ್ಟಂತೆ ಅತಿಥಿಗಳಿಗೆ ಗುಲಾಬಿ ಕೊಟ್ಟು ಶಾಸ್ತ್ರ ಮುಗಿಸಲಾಗುತ್ತಿದೆ. ಹಿಂದೆ ದಪ್ಪನೆಯ ಹೂಮಾಲೆಯನ್ನೇ ಹಾಕುತ್ತಿದ್ದರು. ಹೂ ತುಟ್ಟಿಯಾಗಿರುವ ಊರುಗಳಲ್ಲಿ ಎರಡೇ ಹಾರ ತಂದು ಹಲವರಿಗೆ ಅರ್ಪಿಸುವ ಕೈಚಳಕವೂ ನಡೆಯುತ್ತದೆ. ಹತ್ತಾರು ಕೊರಳಿಗೆ ಅರ್ಪಣೆಯಾಗುವ ಮಾಲೆ ಸೈಡ್‌ವಿಂಗಿಗೆ ಹೋಗಿ ನವೀಕರಣಗೊಂಡು ಕೊನೆಯ ಕೊರಳಿಗೆ ಬರುವಾಗ ಉರುಳಿನ ದಾರಮಾತ್ರ ಆಗಿರುತ್ತದೆ. ಹೂಬೆಳೆವ ಪ್ರದೇಶದಲ್ಲಿ ಈ ಸಮಸ್ಯೆಯಿಲ್ಲ. ನೆನಪಿನ ಸುರುಳಿ ಬಿಚ್ಚುತ್ತಿದೆ—ಅದೊಂದು ಔಷಧಿಗೊ ಸುಗಂಧ ದ್ರವ್ಯ ತಯಾರಿಕೆಗೊ ಪ್ರಸಿದ್ಧವಾಗಿರುವ ಚೆಂಡುಹೂ ಬೆಳೆವ ಪ್ರದೇಶ. ಕುರಿಸಂತೆಗೆ ಬರುವವರು ಕೈಯಲ್ಲಿ ಕುಣಿಕೆಹಗ್ಗ ತರುವಂತೆ ಚೆಂಡುಹೂವಿನ ಮಾಲೆ ಹಿಡಿದು ಜನ ಬಂದಿದ್ದರು. 'ಅತಿಥಿಗಳಿಗೆ ಸನ್ಮಾನ. ಒಬ್ಬೊಬ್ಬರಾಗಿ ಬಂದು ಹಾರಹಾಕಬೇಕು' ಎಂದು ನಿರೂಪಕ ಅಪ್ಪಣೆ ಕೊಟ್ಟನು. ಆರತಕ್ಷತೆಯಲ್ಲಿ ವಧೂವರರಿಗೆ ಹರಸಲು ಪಾಳಿ ಹಚ್ಚುವಂತೆ ನಿಂತ ಜನ ತೆರಪು ಕೊಡದಂತೆ ಮಾಲಾರ್ಪಣೆ ಮಾಡುತ್ತ ಹೋದರು. ಮದುವೆಯಲ್ಲಿ ವೈಚಾರಿಕ ಸೊಕ್ಕಿನಿಂದ ಹಾರ ಹಾಕಿಸಿಕೊಳ್ಳದೆ ಹೋಗಿದ್ದ ನನಗೆ ಆನಂದ ಒಳಗಿಂದ ಉಕ್ಕುತ್ತಿತ್ತು. ಆದರೆ ಕೆಲವೆ ಕ್ಷಣಗಳಲಿ ಕೊರಳು ತುಂಬಿ ಬಾಯಿ ಮೂಗು ಮುಚ್ಚಿಹೋದವು. ಕುತ್ತಿಗೆ ನಿಮಿರಿಸಿಕೊಂಡು ಕೂರಬೇಕಾಯಿತು. ಕುತ್ತಿಗೆಗೆ ಕವೆಗೋಲೊಂದನ್ನು ಕೊಟ್ಟು ತಲೆಯ ಮೇಲೆ ಮುಷ್ಟಿ ಮಂಡಕ್ಕಿ ಒಗೆದಿದ್ದರೆ ಥೇಟು ವಿಮಾನದಲ್ಲಿ ಕೂರಿಸಿದ ಸಾಲಂಕೃತ ಕಳೇವರ! ಕೆಲವೆಡೆ ಹೂಹಾರಕ್ಕೆ ಬದಲು ಖಾದಿನೂಲಿನ ಹಾರ, ಕನ್ನಡದ ಧ್ವಜ ಹಾಕುವುದುಂಟು. ಒಮ್ಮೆ ನನ್ನ ಕೊರಳಿಗೆ ಬಾವುಟ ಸುತ್ತಲಾಯಿತು. ಪಕ್ಕದಲ್ಲಿದ್ದ ಸಭಾಧ್ಯಕ್ಷರಿಗೂ ಹಾಗೆ ಮಾಡಲಾಗಿ ಅವರು 'ನೀವು ಬೆಂಗಳೂರಿನವರು. ಧಾರವಾಡದವರೊಟ್ಟಿಗೆ ಚರ್ಚೆ ಮಾಡದೆ ಅರಿಸಿನ ಕುಂಕುಮದ ಬಾವುಟ ಮಾಡಿದಿರಿ. ಇದನ್ನು ಹಾಕಿದರೆ ನನ್ನ ಕೊರಳಿಗೆ ಹಾವು ಸುತ್ತಿದಂತೆ' ಎಂದು ಗರ್ಜಿಸಿದವರೆ, ಧ್ವಜವನ್ನು ಉಂಡೆ ಮಾಡಿ ನೆಲಕ್ಕೊಗೆದರು. ಸಭೆ ಗರಬಡಿದು ಹೋಯಿತು. ಧ್ವಜಾಪಮಾನ ಮಾಡಿದವರು ಏಕೀಕರಣಕ್ಕೆ ಹೋರಾಡಿದ ಹಿರಿಯರಾದ್ದರಿಂದ ಅಲ್ಲಿದ್ದ ಕನ್ನಡದ ಕಂದಗಳ್ಯಾರೂ ಉಸಿರೆತ್ತಲಿಲ್ಲ.